# ಶೆಡ್ಡಿನ ನೆಲೆ ಕಳೆದುಕೊಂಡ ಗಂಗಾ

ಗಂಗೆ ಇದ್ದ ಶೆಡ್ಡಿನ ಜಾಗದಲ್ಲಿ ಒಂದು ಕಲ್ಯಾಣ ಮಂಟಪ ಕಟ್ಟಿಸಬೇಕೆಂದು ಕೆಲವರು ಬಹಳ ದಿನಗಳಿಂದ ಹಠಕ್ಕೆ ಕುಳಿತಿದ್ದರು. ಅವರ ಹಠದ ಮುಂದೆ ಗೆಲ್ಲಲು ಕಾರಣದ ಬಲ ಯಾರಿಗೂ ಇರದಾಗ ಒಂದು ದಿನ ಶೆಡ್ಡು ನೆಲಸಮವಾಗಿಯೇ ಹೋಯಿತು. ಭಕ್ತಾದಿಗಳು ಬಹಳ ಮುತುವರ್ಜಿ ವಹಿಸಿ ಚಂದಾ ಶೇಖರಿಸಿದರು. ಜೊತೆಗೆ ಸ್ಥಳೀಯ ವರ್ತಕರೂ, ಶ್ರೀಮಂತರೂ ಸಹಕಾರ ತೋರಿದರು. ಒಂದು ಮುನ್ನೂರು ಜನ ಕೂರಬೇಕಾದಷ್ಟರ ಸುವ್ಯವಸ್ಥಿತ ಕಲ್ಯಾಣ ಮಂಟಪ ಕಟ್ಟಲು ನಕ್ಷೆಯೂ ತಯಾರಾಯಿತು.

ಇದ್ದ ಶೆಡ್ಡಿನ್ನು ಬುಲ್‌ಡೋಜರ್ ಬಂದು ಕೆಡವಿದ್ದಾಗ ಗಂಗೆ ಏನು ತಾನೇ ಮಾಡಿಯಾಳು? ಒಡೆಯುವ ಮುನ್ನ ಅವಳಿಗೆ ಖಾಲಿ ಮಾಡಲು ಎರಡು ಮೂರು ಬಾರಿ ಹೇಳಿದರೂ ಅವಳು ವಾಸ ಮುಂದುವರಿಸಿಯೇ ಇದ್ದಳು. ಆದರೆ ಶೆಡ್ಡು ಮುಂದೇ ಬಿದ್ದಾಗ ಅವಳು ಅಳುತ್ತಾ ಕುಳಿತಳು. ಶ್ರೀಧರ ಭಟ್ಟರು ಅವಳ ನೆರವಿಗೆ ಬಂದರು.

